# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 85 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.09.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 85 • PRGI No:KARKAN/2023/88055 • VIJAYANAGARA • 27.09.2024 • Friday • Page:04 • Rs:2













## ಮೈಕ್ರೋ ನ್ಯೂಸ್

### ಇಂದು ಕೊಟ್ಟೂರಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ 66/11ಕೆವಿ ವಿದ್ಯುತ್ ಉಪ–ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಾಹಣ ಕಾಮಗಾರಿ ನಿಮಿತ್ತ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಕೊಟ್ಟೂರು ಮತ್ತು ಸಂಬಂಧ ಪಟ್ಟ ಗ್ರಾಮಗಳಿಗೆ ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 6 ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಸಹಕರಿಸಬೇಕೆಂದು ಇಲ್ಲಿನ ಜೆಸ್ಕಾಂ ಎಇಇ ಲಕ್ಷ್ಮೀದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನವೋದಯ ಪ್ರವೇಶ ಪರೀಕ್ಷೆಗೆ ಅರ್ಜಿ: ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಕುಕನೂರು ಜವಾಹರ ನವೋದಯ ವಿದ್ಯಾಲಯದ 2024–25 ಸಾಲಿನಲ್ಲಿ 6ನೇ ತರಗತಿಯ ಆಯ್ಕೆಗಾಗಿ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಅವಧಿಯನ್ನು ಅಕ್ಟೋಬರ್ 07ರವರೆಗೆ ವಿಸ್ತರಿಸಲಾಗಿದೆ.
ಆಸಕ್ತ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ನವೋದಯ ವಿದ್ಯಾಲಯ ಸಮಿತಿಯ ಜಾಲತಾಣ www.navodaya.gov.in ಮುಖಾಂತರ ಸಲ್ಲಿಸಬೇಕು ಎಂದು ಕುಕನೂರು ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿಶ್ವ ರೇಬಿಸ್ ದಿನಾಚರಣೆ; ಸೆ.27 ಜನಜಾಗೃತಿ ಜಾಥಾ


**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ "ರೇಬಿಸ್ ಗಡಿಗಳನ್ನು ಮೀರಿ ಮುಂದುವರೆಯೋಣ" ಎಂಬ ಘೋಷವಾಕ್ಯದೊಂದಿಗೆ ಸೆ.27 ರಂದು ಬೆಳಿಗ್ಗೆ 08.30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಮುಂಭಾಗದಿಂದ ಜನಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಚಾಲನೆ ನೀಡುವರು. ಜಿಲ್ಲಾ ಶಸ್ತ್ರಚಿಕಿತ್ಸಕ ಬಸರೆಡ್ಡಿ.ಎನ್ ಅವರು ಅಧ್ಯಕ್ಷತೆ ವಹಿಸುವರು.

# ಹಂಪಿ ಬೆಟ್ಟದಲ್ಲಿ ಪಾರಂಪರಿಕ ನಡಿಗೆ

## ಡಿಸಿ ಎಂ.ಎಸ್.ದಿವಾಕರ ಚಾಲನೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ | ಪ್ರವಾಸೋಧ್ಯಮ ಇಲಾಖೆಯಿಂದ ಶಾಂತಿಗಾಗಿ ನಡಿಗೆ



**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವಪ್ರಸಿದ್ಧ ಐತಿಹಾಸಿಕ ಹಂಪಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಪ್ರಯುಕ್ತ ಸೆ.26ರಂದು ಪ್ರವಾಸೋದ್ಯಮ ಇಲಾಖೆಯಿಂದ ಶಾಂತಿಗಾಗಿ ಪಾರಂಪರಿಕ ನಡಿಗೆ ಕಾರ್ಯಕ್ರಮ ನಡೆಯಿತು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಬೆಳ್ಳಂಬೆಳಗ್ಗೆ ಹಂಪಿ ಪ್ರದೇಶಕ್ಕೆ ಆಗಮಿಸಿ ಅಧಿಕಾರಿಗಳೊಂದಿಗೆ ಭಾಗಿಯಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಎದುರು ಬಸವಣ್ಣ ಪ್ರದೇಶದಿಂದ ಮಾತಂಗ ಪರ್ವತ, ಅಚ್ಯುತ್ತರಾಯ ದೇವಸ್ಥಾನ, ಅಚ್ಯುತ 'ರಾಯ ಬಜಾರ್, ಕೋದಂಡರಾಮದೇವಸ್ಥಾನ, ತುಂಗಭದ್ರ ನದಿವರೆಗೆ ಶಾಂತಿಗಾಗಿ ಪಾರಂಪರಿಕ ನಡಿಗೆ ಕಾರ್ಯಕ್ರಮದಡಿ ಜಿಲ್ಲಾಧಿಕಾರಿಗಳು ಹೆಜ್ಜೆ ಹಾಕಿದರು.



ಈ ಸಂದರ್ಭದಲ್ಲಿಅಪಾರ ಜಿಲ್ಲಾಧಿಕಾರಿಗಳಾದ ಇ ಬಾಲಕೃಷ್ಣಪ್ಪ, ಸಹಾಯಕ ಆಯುಕ್ತರಾದ ವಿವೇಕಾ ನಂದ ಪಿ., ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಪ್ರಭುಲಿಂಗಎಸ್ ತಳಕಲ್, ಕೆಎಸ್‌ಟಿಡಿಸಿ ಹೋಟೆಲ್ ವ್ಯವಸ್ಥಾಪಕರಾದ ಸುನಿಲ್ ಕುಮಾರ್, ಪ್ರವಾಸಿ ಮಾರ್ಗದರ್ಶಿಗಳಾದ ವಿರುಪಾಕ್ಷಿ ವಿ ಹಂಪಿ, ಗೋಪಾಲ, ಪ್ರವಾಸಿ ಮಿತ್ರರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಸಿಬ್ಬಂದಿ, ಹಂಪಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಂಪಿ ಪರಿಸರದಲ್ಲಿ ಸುತ್ತಿ ಕಾರ್ಯಕ್ರಮಕ್ಕೆ ಮೆರಗುತಂದರು.

**ಉಪಹಾರ ಸೇವನೆ:** ಕಾರ್ಯಕ್ರಮದ ಬಳಿಕ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಅಧಿಕಾರಿಗಳು ಮತ್ತು ಸಿಬ್ಬಂದಿ ಜೊತೆಗೆ ಉಪಹಾರ ಸೇವನೆ ಮಾಡಿದರು. ಸಿಬ್ಬಂದಿ ಇದ್ದರು


## ಹಂಪಿಯಲ್ಲಿ ಚಿರತೆ ವಾಕಿಂಗ್ ಪ್ರವಾಸಿಗರಲ್ಲಿ ಹೆಚ್ಚಿದ ಆತಂಕ



ಹಂಪಿ ಕೃಷ್ಣ ಬಜಾರ್ ಸಮೀಪದ ಬೆಟ್ಟದ ಮೇಲೆ ಗುರುವಾರ ಚಿರತೆ ಪ್ರತ್ಯಕ್ಷವಾಗಿದ್ದು, ಪ್ರವಾಸಿಗರಲ್ಲಿ ಆತಂಕ ಹೆಚ್ಚಿಸಿದೆ. ಅರಣ್ಯ ಇಲಾಖೆ ಚಿರತೆಯನ್ನು ಸೆರೆಹಿಡಿದು ಮೃಗಾಲಯಕ್ಕೆ ಬಿಡಬೇಕು. ಮಳೆ ಹೆಚ್ಚಾಗಿ ಬಿದ್ದಿದ್ದರಿಂದ ಬೆಟ್ಟಗುಡ್ಡಗಳ ಸುತ್ತಲೂ ಗಿಡಗಂಟೆಗಳು ದಟ್ಟವಾಗಿ ಬೆಳೆದಿವೆ. ಚಿರತೆ ಇರುವ ಜಾಗದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಸಂಬಂಧಿಸಿದ ಇಲಾಖೆಯವರು ಕೈಗೊಳ್ಳಬೇಕೆಂದು ಪ್ರವಾಸಿಗರು ಆಗ್ರಹಿಸಿದ್ದಾರೆ.

# ಗ್ರಾಮ ಆಡಳಿತ ಅಧಿಕಾರಿಗಳಿಂದ ಮುಷ್ಕರ ಕಚೇರಿಗೆ ಬಂದು ಮರಳಿದ ರೈತರು

## ಮೊಬೈಲ್ ಅಪ್ಲಿಕೇಶನ್, ವೆಬ್ ಅಪ್ಲಿಕೇಶನ್, ಲೇಖನಿ ಕೈಬಿಟ್ಟು, ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ



**ಹಂಪಿ ಟೈಮ್ಸ್ ಕೊಟ್ಟೂರು**

ರಾಜ್ಯದ ಗ್ರಾಮ ಆಡಳಿತ ಅಧಿಕಾರಿಗಳ ಸಮಸ್ಯೆಗಳು ಮತ್ತು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ತಾಲೂಕು ಘಟಕದ ಗ್ರಾಮ ಆಡಳಿತ ಅಧಿಕಾರಿಗಳು ಗುರುವಾರ ಮೊಬೈಲ್ ಆಪ್ ಮತ್ತು ವೆಬ್ ಅಪ್ಲಿಕೇಷನ್ ಹಾಗೂ ಲೇಖನಿ ಸ್ಥಗಿತಗೊಳಿಸಿ ತಾಲೂಕು ಕಚೇರಿ ಮುಂಭಾಗ ಕಪ್ಪು ಪಟ್ಟಿ ಧರಿಸಿ ಮುಷ್ಕರ ನಡೆಸಿದರು.

ತಮ್ಮ ಬೇಡಿಕೆಗಳನ್ನು ಶೀಘ್ರ ಈಡೇರಿಸುವಂತೆ ಒತ್ತಾಯಿಸಿ ಕಂದಾಯ ಇಲಾಖೆ ಸಚಿವರು ಕೃಷ್ಣಭೈರೇಗೌಡ ಅವರಿಗೆ ಕೊಟ್ಟೂರು ತಹಶಿಲ್ದಾರ ಅಮರೇಶ್ ಜಿ. ಕೆ ಅವರ ಮೂಲಕ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಕೊಟ್ಟೂರು ತಾಲೂಕು ಗ್ರಾ.ಆ.ಅ ಸಂಘದ ಅಧ್ಯಕ್ಷೆ ಜ್ಯೋತಿಬಾಯಿ ಅವರು, ಕೇಂದ್ರ ಸಂಘದ ಸೂಚನೆ ಮೇರೆಗೆ ಈ ಮುಷ್ಕರ ಕೈಗೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರದ ಗ್ರಾ.ಆ.ಅ ಸೇರಿ ಜಿಲ್ಲಾ ಕಚೇರಿ ಬಳಿ ನಾಳೆ ಮುಷ್ಕರ ನಡೆಸಲಾಗುವುದು ಎಂದರು.

ನೌಕರರ ಸಂಘದ ಅಧ್ಯಕ್ಷ ಜಗದೀಶ್, ನಿವೃತ್ತ ನೌಕರರ ಸಂಘದ ತಾಲೂಕು ಸಂಚಾಲಕರು ಈಶ್ವರಪ್ಪ ತುರುಕಾಣಿ, ಗ್ರಾ.ಆ.ಅ ತಾಲೂಕು ಘಟಕ ಗೌರವ ಅಧ್ಯಕ್ಷರು ಶರಣಬಸವೇಶ, ಖಜಾಂಚಿ ಮಲ್ಲೇಶ್, ಸಂಘಟನಾ ಕಾರ್ಯದರ್ಶಿ ರಮೇಶ್, ಶಾರದ ಕೋಗಳಿ, ಸಹ ಕಾರ್ಯದರ್ಶಿ ಸಿದ್ದೇಶ್, ರೇಖಾ.ಎಸ್. ಕಂದಾಯ ನಿರೀಕ್ಷಕರಾದ ಹಾಲಸ್ವಾಮಿ, ಡಿ.ಶಿವಕುಮಾರ್, ಗ್ರಾ.ಆ.ಅಧಿಕಾರಿಗಳಾದ ಹಳ್ಳಿ ಹರೀಶ್, ಮಂಗಳ, ಬಸಮ್ಮ, ಸುಧಾ ಜೈನ್, ದ್ಯಾಮಮ್ಮ, ಸುಧಾ ಬೆಟ್ಟಪ್ಪನವರ್, ತನುಜಾ, ಕೊಟ್ರಮ್ಮ ಚಂದ್ರಿಕಾ, ವನಜಾಕ್ಷಿ, ಜಿ.ಕಾವೇರಿ, ಸೌಭಾಗ್ಯ ಸೇರಿದಂತೆ ಇತರರಿದ್ದರು.

# ರೈತರು ಮೆಣಸಿನಕಾಯಿ ಬೆಳೆಯಲ್ಲಿ ಥ್ರಿಪ್ಸ್ ನುಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸಕ್ತ ವರ್ಷದಲ್ಲಿ ಬಳ್ಳಾರಿ, ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕುಗಳಲ್ಲಿ 26 ಸಾವಿರ ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗಿದ್ದು, ಕಳೆದ ವರ್ಷ ಮೆಣಸಿನಕಾಯಿ ಬೆಳೆಯನ್ನು ಬಾಧಿಸಿದ್ದ ಹೊಸ ಥ್ರಿಪ್ಸ್ ನುಸಿ (ಥ್ರಿಪ್ಸ್ ಪಾರ್ವಿಸ್ಪಿನಸ್) ಕೀಟವು ಈ ಬಾರಿಯೂ ಕಾಣಿಸುವ ಸಂಭವವಿದ್ದು, ಕೀಟದ ನಿರ್ವಹಣೆಗೆ ರೈತರು ಸೂಕ್ತ ಕ್ರಮ ಅನುಸರಿಸಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಪ್ರೌಢ ಕೀಟಗಳು ಗುಂಪು ಗುಂಪಾಗಿ ಎಲೆಗಳ ಕೆಳಭಾಗದಲ್ಲಿ, ಹೂಗಳ ಒಳಗೆ ಮತ್ತು ಹೊರಗೆ ಕಂಡುಬರುತ್ತವೆ. ಮರಿ ಹಂತದ ನುಸಿಗಳು ಎಲೆಗಳ ಕೆಳಭಾಗದಲ್ಲಿ ಕೇಂದ್ರೀಕೃತಗೊಂಡಿರುತ್ತವೆ. ಕೀಟಗಳು ಸಸ್ಯದ ಬಹುಭಾಗಗಳಿಂದ ರಸವನ್ನು ಹೀರುವುದರಿಂದ ಸಸ್ಯದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಎಲೆಗಳ ಅಂಚುಗಳು ಮೇಲ್ಮುಖವಾಗಿ ಮುದುಡುವುದು, ಹೂಗಳು ಉದುರುವುದು ಮತ್ತು ಬೆಳವಣಿಗೆ ಹಂತದಲ್ಲಿರುವ ಚಿಗುರುಗಳು ಗುಂಪಾಗಿ ಹೂಬಿಡದೆ ಒಣಗುವುದು ಸಾಮಾನ್ಯವಾಗಿ ಕಂಡುಬರುವ ಹಾನಿಯ ಲಕ್ಷಣಗಳಾಗಿವೆ. ಕಾಲ ಕ್ರಮೇಣ, ಕಾಯಿಗಳ ಸಂಖ್ಯೆ ಕಡಿಮೆಯಾಗಿ ಇಳುವರಿಯು ಗಣನೀಯ ಪ್ರಮಾಣದಲ್ಲಿ ಕುಂಠಿತಗೊಳ್ಳುತ್ತದೆ. ಅವಶ್ಯಕತೆಗನುಸಾರವಾಗಿ ಶಿಫಾರಸ್ಸು ಮಾಡಿರುವ ರಾಸಾಯನಿಕ ಕೀಟನಾಶಕಗಳನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು



ಪುಟ: 4ರಲ್ಲಿ ನೋಡಿ



ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com